ಅ) ವಿಶ್ವ ಬ್ಯಾಂಕ್ ನೆರವಿನಿಂದ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿಯಲ್ಲಿ ಆಳವಡಿಸಲಾದ ಸದಲಗಾ ಮತ ಕ್ಷೇತ್ರದ ಗ್ರಾಮಗಳು ಯಾವುವು?

ಆ) ಈ ಕಾಮಗಾರಿಗಳಿಗಾಗಿ ಸರ್ಕಾರವು ವಿವಿಧ ರೂಪದಲ್ಲಿ ಖರ್ಚು ಮಾಡುವ ಹಣವೆಷ್ಟು?

ಇ) ಕಾಮಗಾರಿಗಳು ಈಗ ಯಾವ ಹಂತದಲ್ಲಿವೆ ಹಾಗೂ ಪೂರ್ಣಗೊಳಿಸಲು ಬೇಕಾಗುವ ಕಾಲಾವಕಾಶವೆಷ್ಟು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ವಿಶ್ವ ಬ್ಯಾಂಕ್ ನೆರವಿನ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ ಯೋಜನೆಯಡಿಯಲ್ಲಿ (1) ಜೋರಗಾಂವ್ (2) ಕುನ್ನೂರು ಮತ್ತು (3) ಸಿದ್ನಾಳ್ ಗ್ರಾಮಗಳನ್ನು ಯೋಜನೆಯ ಎರಡನೇ ಹಂತದಲ್ಲಿ ಆಳವಡಿಸಲಾಗಿದೆ.

ಆ) ಸದರಿ 3 ಗ್ರಾಮಗಳ ತಾಂತ್ರಿಕ ಅಧ್ಯಯನ ವರದಿ ತಯಾರಿಕೆ ಹಂತದಲ್ಲಿದ್ದು, ಅವು ಬಂದ ನಂತರ ವಿವಿಧ ರೂಪದಲ್ಲಿ ಖರ್ಚು ಮಾಡುವ ಹಣದ ವಿವರಗಳು ತಿಳಿಯುತ್ತವೆ.

ಇ) ಸದರಿ ಗ್ರಾಮಗಳಲ್ಲಿ ಜಲಮೂಲಕ ಸ್ಥಾಪಿಸಲಾಗಿದೆ ಮತ್ತು ಈ ಗ್ರಾಮಗಳಿಗೆ ತಾಂತ್ರಿಕ ಅಧ್ಯಯನ ವರದಿಗಳು ತಯಾರಾಗುತ್ತಿವೆ. ಹಾಗೂ ಕಾಮಗಾರಿಗಳನ್ನು ಪೂರ್ಣಗೊಳಿಸಲು $1\frac{1}{2}$ ಯಿಂದ 2 ವರ್ಷಗಳು ಬೇಕಾಗುತ್ತದೆ.

ಹಂಗಾಮಿ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಅಂಧರು.

893 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ನಾಲ್ಕು ವರ್ಷಗಳಿಂದ ಹಂಗಾಮಿ. ಸಂಗೀತ ಶಿಕ್ಷಕರಾಗಿ) ವಿವಿಧ ಶಿಕ್ಷಣಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಧರ ಸಂಖ್ಯೆ ಎಷ್ಟು?

ಆ) ಇದರ ಸೇವೆಯನ್ನು ಖಾಯಂಗೊಳಿಸಲು ಸಾಧ್ಯವಿಲ್ಲವೇ?

ಇ) ಹಾಗಿದ್ದಲ್ಲಿ ಯಾವಾಗಿನಿಂದ ಇದನ್ನು ಜಾರಿಗೆ ತರಲಾಗುವುದು.

ಈ) ಇದರ ಸೇವೆಯನ್ನು ಬೇಸಿಗೆ ರಜದಲ್ಲಿ ಹೇಗೆ ಉಪಯೋಗಿಸಿ ಕೊಳ್ಳಲಾಗುವುದು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ) ಕಳೆದ ನಾಲ್ಕು ವರ್ಷಗಳಿಂದ ಹಂಗಾಮಿ ಸಂಗೀತ ಶಿಕ್ಷಕರುಗಳನ್ನು ನೇಮಕಾತಿ ಮಾಡಿಕೊಂಡಿರುವುದಿಲ್ಲ.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮೈಸೂರು ನಗರದಲ್ಲಿ ಚಾಮುಂಡಿ ಸಫಾರಿ ಯೋಜನೆ.

1155 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?